Doc-4 T-P-2

(1)

Regd No. BG 155 ಶ್ರೀ 6-1-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯೆಚ್ಚು ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಚುನಾವಣೆಯಲ್ಲಿ 24 ಪಕ್ಷಗಳು ಸ್ಪರ್ಧಿಸುವವು

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗಸೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಸ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಸೆರಾ ಟಾಕೀಸಿನವರು, ಪದ್ಮಭೂಷಣ ಸೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ

ಸಂಪಾದಕ ' ಸತ್ಯವಾದಿ '
ಚಾಮರಾಜಪುರಂ, ಮೈಸೂರು 4.

ರೈತರಿಗೆ ಹಿತ ಬೋಧೆ

ತುನುಕೂರು— ನಾಗಲಮಡಿಕೆ ಸುಬ್ರಹ್ಮಣ್ಯ ಸ್ವಾಮಿ ಜಾತ್ರೆಯಲ್ಲಿ ಉತ್ತಮ ವಾದ ಧನಗಳಿಗೆ ಬಹುಮಾನ ವಿನಿಯೋಗ ಮಾಡುತ್ತಾ, ಆರೋಗ್ಯಮಂತ್ರಿ ಶ್ರೀ ರಾಮಕೃಷ್ಣರು ಧನಸಂಪತ್ತನ್ನು ಉತ್ತಮಗೊಳಿಸಲು ರೈತರಿಗೆ ಕರೆಯಿತ್ತರು.

ನಾಗರಕೋಯಿಲ್‌ನಲ್ಲಿ

ನಾಗರಕೋಯಿಲ್— ಚುನಾವಣೆ ಸಂಬಂಧದ ವಾತಾವರಣವು ಬಿಸಿ ಏರುತ್ತಿದೆ. ಜಿಲ್ಲಾ ಹೊರಗಿನಿಂದ ತಂಡೋಪತಂಡವಾಗಿ ಲಾರಿಗಳಲ್ಲಿ ವಿರುದ್ಧ ಪಕ್ಷಗಳ ಬೆಂಬಲಿಗರು ಬರುತ್ತಿದ್ದಾರೆ. ಕಾಂಗ್ರೆಸ್ ಮತ್ತು ಡಿ ಎಂ ಕೆ ನೇತೃತ್ವದಲ್ಲಿನ ಸ್ಪರ್ಧೆಯು ಕ್ತ ರಂಗವು ತಮ್ಮ ಪಕ್ಷದವರಿಗೆ ಎಂಥಾ ತೀವ್ರ ಪರಿಸ್ಥಿತಿ ಒದಗಿದರೂ ಹಿಂಸಾಕೃತ್ಯ ತ್ಯಜಿಸಲು ಮನವಿನೂಡಿದ್ದಾರೆ. ಕ್ಷೇತ್ರದ ವಿವಿಧ ಸ್ಥಾನಗಳಿಗೆ ಪೋಲೀಸು ಉಸ್ತುವಾರಿ ಭದ್ರಪಡಿಸಲಾಗಿದೆ. ಪೋಲೀಸು ಐ.ಜಿ ಯವರು ಬಂದಿದ್ದು ಚುನಾವಣೆ ಮುಗಿಯುವವರಿಗೆ ಇಲ್ಲೇ ಇರುವರು.

★

ಹಾರ, ಚಪ್ಪಾಳೆ, ಪೋಲೀಸು

ಔರಂಗಾಬಾದು— ಹಾರಗಳು, ಚಪ್ಪಾಳೆಗಳು, ಪೋಲೀಸರು ಮಂತ್ರಿಗಳನ್ನು ಕೆಡಿಸುತ್ತಿವೆಯೆಂದೂ ಮತ್ತು ಆ ಸ್ಥಾನದಲ್ಲಿ ಹೆಚ್ಚು ಕಾಲವಿರುವಂತೆ ಮಾಡುತ್ತಿವೆಯೆಂದೂ ಕೇಂದ್ರ ವಿದ್ಯಾಮಂತ್ರಿ ಶ್ರೀ ತ್ರಿಗುಣ ಸೆ ಹೇಳಿದರು – ಸ್ವಾತಂತ್ರ್ಯದ ನಂತರ ಮಂತ್ರಿಗಳು ಮಾಡಿರುವ ಭಾಷಣಗಳನ್ನೆಲ್ಲಾ ಏಣಿಯಂತೆ ಸೇರಿಸಿದರೆ, ನಾವು ಚಂದ್ರನನ್ನು ಮೊದಲು ಸೇರುತ್ತೇವೆಂದು ಅವರು ವಿನೋದವಾಗಿ ಹೇಳಿದರು.

★

ಭಾರತದ ಕಾರುಗಳ ಬಿಕರಿ

ರೊಮೇನಿಯವು ಭಾರತದಲ್ಲಿ ತಯಾರಾದ 2000 ಫಿಯಟ್ ಕಾರುಗಳನ್ನು ಕೊಳ್ಳಲಿದೆ.

●

ಕರನಿರಾಕರಿ ಚಳವಳಿ !

ಎರ್ನಾಕುಲಂ – ಮಲ್ಲಾಪುರ ಜಿಲ್ಲೆ ನಿರ್ಮಿಸಲು ರಾಜ್ಯ ಸರ್ಕಾರದ ನಿರ್ಧಾರವನ್ನು ಪ್ರತಿಭಟಿಸಿ ಕರನಿರಾಕರಣ ಚಳವಳವನ್ನು ಹೂಡಲು ಕೇರಳ ಜನಸಂಘ ಶಾಖೆ ಸಲಹೆ ಮಾಡಿದೆ.

ಅಂಚೆ ರಿಯಾಯಿತಿ

ಹೈದರಾಬಾದು— ಸಣ್ಣ ಪತ್ರಿಕೆಗಳ ಈಗಿನ ಅಂಚೇದರವನ್ನು 5 ಪೈಸೆಯಿಂದ 2 ಪೈಸೆಗೆ ಇಳಿಸಬೇಕೆಂಬ, ಪೈ ಸೂರು ವಾರ್ತಾ ಮಂತ್ರಿ ಶ್ರೀ ರಾಜಕೇಸರ ಮೂರ್ತಿಯವರ ಸಲಹೆಯನು ದಕ್ಷಿಣ ವಲಯದ ವಾರ್ತಾ ಮಂತ್ರಿಗಳ ಸಮ್ಮೇಳನವು ಸ್ವೀಕರಿಸಿತು.

●

3 ನೇ ಸಾರಿ

ಶಿವಮೊಗ್ಗ— ಕಾಲವಧಿಯು ಡಿಸೆಂಬರು 31 ಕ್ಕೆ ಮುಗಿದ ಇಲ್ಲಿಯ ಪೌರಸಭೆ ಅವಧಿಯು ಮಾರ್ಚಿ 31 ರವರೆಗೆ ಮತ್ತಿ ಹೆಚ್ಚಿಸಲಾಗಿದೆ – ಈ ರೀತಿ ಅವಧಿ ಹೆಚ್ಚಿಸಿರುವುದು ಇದು 3 ನೇ ಸಾರಿ.

★

ಬಲವಂತ ಹರತಾಳ

ವೆಲ್ಲೂರು— ಕಿಲವಣಿ ಗ್ರಾಮದಲ್ಲಿ ಕಿರ್ಷ ಘರ್ಷಣೆಯ ಪರಿಣಾಮವ 42 ಸಾವನ್ನು ಪ್ರತಿಭಟಿಸಿ, ಕಮ್ಯೂನಿಸ್ಟು ಪಾರ್ಟಿಗಳು ಇಲ್ಲಿ ಹೋಟಲು ಮತ್ತು ಅಂಗಡಿಗಳನ್ನು ಮೊನ್ನೆ ಬಲವಂತವಾಗಿ ಮುಚ್ಚಿಸಿದರು

★

ಪಂಜಿನ ಮೆರವಣಿಗೆ

ಚಿದಂಬರಂ ಕಿಲರ್ಕೆನುಣಿ ಗ್ರಾಮದಲ್ಲಿ ಬೆಂಕಿಗೆ ಆಹುತಿಯಾದವರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಲು 200 ಮಂದಿ ವಾನು ಕಮ್ಯೂನಿಸ್ಟರು ಮೊನ್ನೆ ಬೀದಿಗಳಲ್ಲಿ ಉರಿಯುವ ಪಂಜು ಹಿಡಿದು ಮೆರವಣಿಗೆ ನಡೆಸಿದರು.

ಚುನಾವಣಾ ಬಹಿಷ್ಕಾರವೇ

ಡಾಕಾ— 1970 ರಲ್ಲಿನ ಪಾರ್ಲಿಮೆಂಟು ಮತ್ತು ಅಧ್ಯಕ್ಷ ಚುನಾವಣೆಯನ್ನು ವಿರೋಧ ಪಕ್ಷಗಳು ಬಹಿಷ್ಕರಿಸಬಹುದೆಂದು ಹೇಳಲಾಗುತ್ತಿದೆ.

ಡಿ ಎಂ ಕೆ ಕಾರ್ಯಕರ್ತನ ಸಾವು

ನಾಗರಕೊಯಿಲ್— ಶನಿವಾರ ಮಧ್ಯರಾತ್ರಿ ನಂತರ ಚುನಾವಣಾ ಪಕ್ಷಗಳ ಕಾರ್ಯಕರ್ತರಲ್ಲಿ ಆದ ಘರ್ಷಣೆಯಲ್ಲಿ ಚೂರಿ ಇರಿತದಿಂದ ಡಿ ಎಂ ಕೆ ಯ ಒಬ್ಬನು ಸತ್ತು ಇಬ್ಬರು ಗಾಯಗೊಂಡರು – 200 ಲಾರಿಗಳಲ್ಲಿ ಡಿ ಎಂ ಕೆ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಬಂದಿರುವರು – ಚುನಾವಣಾ ಕ್ಷೇತ್ರದಲ್ಲಿ ಲಾರಿ ಮತ್ತು ಬಸ್ ಬರುವದನ್ನು ಪ್ರತಿಬಂಧಿಸಲಾಗಿದೆ.

24 ಪಕ್ಷಗಳಲ್ಲಿ ಸ್ಪರ್ಧೆ

ಲಕ್ನೊ— ಉತ್ತರಪ್ರದೇಶದ ಮಧ್ಯವರ್ತಿ ಚುನಾವಣೆಯಲ್ಲಿ 24 ರಾಜಕೀಯ ಪಕ್ಷಗಳು ಸ್ಪರ್ಧಿಸುವವೆಂದು ಚುನಾವಣಾ ಕಮಿಷನರರ ಆಫೀಸು ತಿಳಿಸಿದೆ.

ಟೈರುಗಳ ಆಮದು,

ನವದೆಹಲಿ— 38500 ಸ್ಕೂಟರು ಟೈರುಗಳನ್ನು ಆಮದು ಮಾಡಿಕೊಳ್ಳಲು ಸರ್ಕಾರ ನಿರ್ಧರಿಸಿದೆ – 21500 ಮೋಟಾರು ಸೈಕಲ್ ಟೈರುಗಳನ್ನು ಆಮದು ಮಾಡಿಕೊಳ್ಳಲು ಸರ್ಕಾರ ನಿರ್ಧರಿಸಿದೆ.

★ಲಂಡ್ನ— ಇಲ್ಲಿನ ಗಾಟ್‌ವಿಕ್ ವಿಮಾನ ನಿಲ್ದಾಣದಲ್ಲಿ ಇಳಿಯಲು ಬಂದ ಒಂದು ಆಫ್ಘರ್ಷ ವಿಮಾನವು ಸಿಡಿದು ಒಂದು ಮನೆ ಮೇಲೆ ಬಿದ್ದು ಅದನ್ನು ನಾಶಮಾಡಿತು – ಅವರಲ್ಲಿದ್ದವರಲ್ಲಿ 52 ಮಂದಿ ಸತ್ತರು ; ಇವರಲ್ಲಿ ಭಾರತೀಯರೂ ಇದ್ದಾರೆ.

ಪ್ರಯಾಣಿಕರಿಗೆ ಬೇಕಾದ ಕಿಟ್ ಬ್ಯಾಗ್, ಹೋಲ್ಡ್ ಆಲ್, ಕ್ವಿಲ್ಟ್, ಏರ್‌ಪಿಲ್ಲೋ, ಸೂಟ್ ಕೇಸ್, ಟ್ರಂಕು ಮುಂತಾದವುಗಳಿಗೆ ಮೈಸೂರಿನ ಬ್ಯಾಂಕ್ ರೋಡ್ ಬಾಹುಸಾರ್ ಜ್ಞಾಪಕದಲ್ಲಿಡಿ. ಒಂದೇ ಬೆಲೆ, ನ್ಯಾಯವಾದ ಬೆಲೆ ಮತ್ತು ನಿಮಗೆ ಅನುಕೂಲವಾದ ಬೆಲೆ.

ಜ್ಯೋತಿಷ್ಯದಲ್ಲಿನ ನಂಬಿಕೆ

ಹಿಂದೂಗಳು ಜ್ಯೋತಿಷ್ಯವನ್ನು ನಂಬುತ್ತಾರಾಗಿಅವರನ್ನು ಮೂಢ ನಂಬಿಕೆ ಟುವರೆನ್ನಲಾಗುತ್ತಿದೆ. ಆದರೆ ಮಿಲಿಯಗಟ್ಟಲೆ ಅಮೇರಿಕನ್ನರು ಅಮೇರಿಕಾ ಅಧ್ಯಕ್ಷ ಚುನಾವಣೆ ಬಗ್ಗೆ ಜೋತಿಷ್ಯರೊಡನೆ ಪರ್ಯಾಲೋಚನೆ ನಡೆಸಿದರು. ಜ್ಯೋತಿಷ್ಯರಿಗೆ ಅಮೇರಿಕಾದಲ್ಲಿ ಒಳ್ಳೇ ಲಾಭದಾಯಕ ವ್ಯಾಪಾರವಿದೆ.

ಹಿಂದೆ ಅನೇಕ ಪ್ರಖ್ಯಾತ ಜ್ಯೋತಿಷ್ಯರಿದ್ದರು. 1414 ರಲ್ಲಿ ಡಿ"ಏಯ್ಲಿಯು 1789 ರಲ್ಲಿ ನಡೆದ ಫ್ರೆಂಚ್ ಕ್ರಾಂತಿ ಬಗ್ಗೆ ಭವಿಷ್ಯ ನುಡಿದಿದ್ದನು. 1503–66 ರಲ್ಲಿದ್ದ ನಸ್ಟ್ರಡಾವಿಸ್ 1 ನೇ ಚಾರ್ಲ್ಸ್ ಕೊಲೆ ಮಾಡಲ್ಪಟ್ಟ ಇಂಗ್ಲೀಷ್ ಕ್ರಾಂತಿ ವಿಷಯವನ್ನು ತಿಳಿಸಿದ್ದನು. ಫ್ರೆಂಚ್ ಕ್ರಾಂತಿಯ, ಹಿಟ್ಲರು ಸಂಬಂಧದ ಯುದ್ಧ ವನ್ನೂ ತಿಳಿಸಲಾಗಿತ್ತು.

ಎರಡು ಸಾವಿರ ಮಿಲಿಯ ಮಾರ್ಕುಗಳಿಗೆ ಜವಾಬ್ದಾರರು

ಬರ್ಲಿ— ತಮ್ಮ 42 ನೇ ಜಯಂತಿಯ ಕೇವಲ ಕೆಲವೇ ವಾರಗಳ ಮುನ್ನ ಡೊ ॥ ಎರ್‌ಹಾರ್ಡ್ ಇತ್ಲರವರು ಕೆಬಿನೆಟ್ಟಿನ ಒಂದು ಪದವಿಗೆ ಚುನಾಯಿತರಾದರು. ಈ ಪದವಿಯಲ್ಲಿರುವದೆಂದರೆ ಅಂತರ್‌ರಾಷ್ಟ್ರೀಯ ಆರ್ಥಿಕ ಸಹಕಾರಕ್ಕಾಗಿಟ್ಟಿರುವ ಎರಡು ಸಾವಿರ ಮಿಲಿಯ ಮಾರ್ಕುಗಳಿಗೆ ಇವರು ಜವಾಬುದಾರರಾದಂತೆ ! ಅಂತೆಯೇ ಈ ಹಣದ ವಿನಿಯೋಗದ ಇತರ ಆಡಳಿತದ ಸಕಲ ಜವಾಬ್ದಾರಿಯನ್ನೂ ಕೂಡ ಇವರೇ ವಹಿಸಬೇಕು. (ಐ ಪಿ ಎಫ್)

ಆತ್ಮಹತ್ಯೆಗೆ ಕಾರಣ ಇಲ್ಲ ಸಂಸಾರದ ಗೊಂದಲ

ನ್ಯೂರೆಂಬರ್ಗ್ (ಡಾಡ್)— ಇತ್ತೀಚೆಗೆ ಪಶ್ಚಿಮ ಜರ್ಮನಿಯಲ್ಲಿನ ಅಂಕಿ ಅಂಶಗಳಿಂದ ತಿಳಿದುಬಂದಿರುವ ವಿಚಾರಗಳಿಂದ ಆತ್ಮಹತ್ಯ ಮಾಡಿಕೊಳ್ಳುತ್ತಿರುವವರು ಆರ್ಥಿಕ ಮುಗ್ಗಟ್ಟಿಗಿಂತಲೂ ಹೆಚ್ಚಾಗಿ ಪ್ರಣಯನೈಧ ಅಥವಾ ಸಾಂಸಾರಿಕ ಗೊಂದಲದಿಂದ ಎಂಬುದು ವ್ಯಕ್ತಪಟ್ಟಿದೆ. (ಯೂ ಪಿ ಎಸ್)



Help The Gorakshana

Quality Printing — Neat Binding

Lakshminarasimha Press

Sivarampet, Mysore

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ಶಿ ನ್ ಜಯಪ್ರದ 3 ನೇ ವಾರ

ಅದ್ಭುತ, ಅಸಮಾನ, ಅಸಾಧಾರಣ ಫಲಂಗೀಳಿನ ವ್ಯಕ್ತಿಗಳ ವೈಭವಪೂರಿತ ಆಗಮನ

— ಜೆಮಿನಿಯವರ ಹಾಸ್ಯಮಯ ವರ್ಣರಂಜಿತ ಚಿತ್ರ (ಹಿಂದಿ) —

ತೀನ್ ಬಹುರಾಣಿಯಾ

ತಾರಾಗಣ — ಸಾಹುಕಾರ್ ಜಾನಕಿ, ಕಾಂಚನ, ಜಯಂತಿ, ಶಶಿಕಲಾ, ಆಘಾ, ರಮೇಶ್‌ದೇವ್, ರಾಜೇಂದ್ರನಾಥ್, ಪೃಥ್ವಿರಾಜ್ ಕಪೂರ್

[ದಿನ 3 ಪ್ರದರ್ಶನಗಳು]

ಆಪೆರಾ— ಜನವ್ರಿಯ 5 ನೇವಾರ

ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

ಪ್ಯಾಲಾದ್

ಪಾತ್ರ – ಜಿತೇಂದ್ರ, ಬಬಿತಾ, ಸುಜೀತ್ ಕುಮಾರ್, ಮೆಹಮೂದ್

ನಿರ್ದೇಶನ – ಕುಂದನ್ ಕುಮಾರ್ ಸಂಗೀತ–ಚಿತ್ರಗುಪ್ತ

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah, Sri Madhav Shenoi Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Protect the Cow

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4